ಅಮಲ್ಜಾರಿ ಸಂಖ್ಯೆ 11/2014
ಪಿ.ಡಬ್ಲ್ಯೂ -2

**ದಿಃ 26.06.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ ಡಿಕ್ರಿ ಹೋಲ್ಡರ್ ನಂಬರ 1 ಬಿ ಡಿ ಇ ಎಫ್ ಪರ ಶ್ರೀ ಬಿ ಹೆಚ್ ವಕೀಲರಿಂದಃ -**

ಓ ಎಸ್ ನಂಬರ 15/2013 ರ ಪ್ರತಿವಾದ ಪತ್ರವನ್ನು ಸಾಕ್ಷಿಗೆ ಈಗ ತೆರೆದ ನ್ಯಾಯಾಲಯದಲ್ಲಿ ತೋರಿಸಿ ಸದರಿ ಪ್ರತಿವಾದ ಪತ್ರವು ನಿಮ್ಮ ತಂದೆಯವರು ಸದರಿ ಓ ಎಸ್ ನಂಬರ 15/2013 ರಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದವರಿದ ನನ್ನ ತಂದೆಯವರು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿದ್ದಾರೆ ಎನ್ನುತ್ತಾರೆ. ಸದರಿ ಪ್ರತಿವಾದ ಪತ್ರವು ಈಗಾಗಲೇ ನಿ ಪಿ 14 ಎಂದು ಗುರುತಿಸಲಾಗಿದೆ. ಸದರಿ ಅಮಲ್ಜಾರಿ ಅರ್ಜಿಯಲ್ಲಿ ನಿಮ್ಮ ತಂದೆ ನಾಗೇಂದ್ರಪ್ಪನವರ ಮೃತಪಟ್ಟ ನಂತರ ನಾಗೇಂದ್ರಪ್ಪನ 2 ನೇ ಹೆಂಡತಿ ಮತ್ತು ಮಕ್ಕಳು ಅರ್ಜಿಯನ್ನು ನಾವು ಕೂಡ ವಾರಸುದಾರರು ಎಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ಮತ್ತು ನನ್ನ ತಾಯಿಯ ಗಮನಕ್ಕೆ ಬಾರದಂತೆ ಸದರಿ ಯವರು ನಮ್ಮಗಳನ್ನು ಸೇರಿಸಿಕೊಂಡು ಅರ್ಜಿ ಸಲ್ಲಿಸಿದ್ದಾರೆಂದು ಹೇಳುತ್ತಾರೆ. ಸದರಿಯವರು ನಿಮ್ಮ ತಂದೆ ಕಾನೂನು ಬದ್ಧ ವಾರಸುದಾರರಾದ ಕಾರಣ ಅರ್ಜಿ ಸಲ್ಲಿಸಿದ್ದಾರೆ ಎಂರದೆ ಸರಿಯಲ್ಲ. ಅಮಲ್ಜಾರಿ ಅರ್ಜಿಯಲ್ಲಿ ಬರುವ ಹಣವನ್ನು ಸದರಿ ಡಿಹೆಚ್ಆರ್ ನಂಬರ ಬಿ ಡಿ ಇ ಎಫ್ ಕೂಡ ಪಡೆಯಲು ಅರ್ಹರು ಎಂದರೆ ಸರಿಯಲ್ಲ. ಸದರಿಯವರಿಗೆ ಡಿಕ್ರಿ ಹಣದ ಭಾಗವನ್ನು ಕೊಡಬಾರದು ಎಂಬ ಉದ್ದೇಶಕ್ಕಾಗಿ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.